## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

**ಓ.ಎಸ್. ಸಂಖ್ಯೆ : *136/2018***

**ಪಿಡಬ್ಲ್ಯೂ- *1* ಪರಮಶಿವ**

**ದಿನಾಂಕ : *01-08-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಶ್ರೀ. ಎ ಕೆ ಎಂ / ಎ ಬಿ ಕೆ *4* ನೇ ಪ್ರತಿವಾದಿ ಪರ ವಕೀಲರಿಂದ :**

ನಾನು ಹೆಚ್‌ಪಿಸಿಎಲ್, ಭಾರತ್ ಪೆಟ್ರೋಲಿಯಂ ಹಾಗೂ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಗಳ ಮೇಲೆ ಈ ದಾವೆ ಹೂಡಿರುತ್ತೇನೆ. ನಾನು ಹೆಚ್ ಪಿ ಸಿ ಎಲ್ ನ ಡಿಸ್ಟ್ರಿಬ್ಯುಟರ್ ಆಗಿರುತ್ತೇನೆ. 4 ನೇ ಪ್ರತಿವಾದಿಯು ಜಾಹಿರಾತು ನೀಡಿದ್ದರಿಂದ ಅವರನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. 4 ನೇ ಪ್ರತಿವಾದಿಯು ಈ ದಾವೆಯಲ್ಲಿ ಅನಾವಶ್ಯಕ ಪಕ್ಷಗಾರರಾಗಿದ್ದು ಅವರ ಮೇಲೆ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಯಾವುದೇ ಡಿಸ್ಟ್ರಿಬ್ಯುಟರಷನ್ ಸಂಬಂಧಿಸಿದಂತೆ ಜಾಹಿರಾತು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಡಿಸ್ಟ್ರಿಬ್ಯುಷನ್ ಏಜೆನ್ಸಿ ತೆಗೆದುಕೊಳ್ಳುವಾಗ ಕಂಪನಿ ಜೊತೆ ಒಪ್ಪಂದ ಮಾಡಿಕೊಳ್ಳುತ್ತೇವೆ ಎಂದರೆ ಸರಿಯಲ್ಲ. ಸದರಿ ಒಪ್ಪಂದ ಪತ್ರವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಹೆಚ್ ಬಿ ಸಿ ಎಲ್ ಕಂಪನಿಯವರಿಗೆ ನಾವು ಮಾಡಿಕೊಂಡ ಒಪ್ಪಂದ ಪತ್ರದ ಷರತ್ತಿನ ಪ್ರಕಾರ ಬೇರೆ ಡಿಸ್ಟ್ರಿಬ್ಯುಟರ್ ಗೆ ನೀಡುವ ಬಗ್ಗೆ ಜಾಹಿರಾತು ನೀಡುವ ಅಧಿಕಾರ ಇರುತ್ತದೆ ಎಂದರೆ ಸಾಕ್ಷಿಯು ಆ ರೀತಿ ಜಾಹಿರಾತು ಮಾಡುವ ಪೂರ್ವದಲ್ಲಿ ಆ ಬಗ್ಗೆ ಸರ್ವೆ ನಡೆಸಿ ಈಗ ಅಸ್ತಿತ್ವದಲ್ಲಿರುವ ಏಜೆನ್ಸಿಯವರಿಗೆ ಯಾವುದೇ ತೊಂದರೆ ಆಗದಿದ್ದ ಪಕ್ಷದಲ್ಲಿ ಆ ರೀತಿ ಡಿಸ್ಟ್ರಿಬ್ಯುಷನ್ ಕೊಡಬಹುದು ಎಂದು ನುಡಿಯುತ್ತಾರೆ. ಆ ರೀತಿ ಸರ್ವೆ ಮಾಡಿಸಿಯೇ ಆ ರೀತಿ ಜಾಹಿರಾತು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಡಿಸ್ಟ್ರಿಬ್ಯುಷನ್ ನೀಡುವುದು ಸರ್ಕಾರದ ಪಾಲಿಸಿ ವಿಚಾರಗಳು ಎಂದರೆ ಸಾಕ್ಷಿಯು

This is a True Copy of the Court Records Online. Authenticated @ districts.ecourtsindia.com/cnr/KAKD520016322018/truecopy/order-2.pdf

www.ecourtsindia.com

ಸೀಲಿಂಗ್ ಲಿಮಿಟ್ ನ್ನು ಪರೀಕ್ಷಿಸಿಯೇ ಮಾಡಬೇಕು ಎಂದು ನುಡಿಯುತ್ತಾರೆ. ಸದರಿ ಒಪ್ಪಂದ ಪತ್ರದಲ್ಲಿ ನಮ್ಮ ಹಾಗೂ ಕಂಪನಿಯ ನಡುವೆ ಯಾವುದಾದರು ವಿವಾದಗಳು / ವ್ಯಾಜ್ಯಗಳು ಉದ್ಭವಿಸಿದರೆ ಅದನ್ನು ಆರ್ಬಿಟ್ರೇಷನ್ ಮೂಲಕ ತೀರ್ಮಾನ ಮಾಡಿಕೊಳ್ಳಬೇಕೆಂದು ಷರತ್ತು ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ನಾನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಈ ದಾವೆಯಲ್ಲಿ ಕೇಳಿದ ಪರಿಹಾರವನ್ನು ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಯನ್ನು ಅನಾವಶ್ಯಕ ಪಕ್ಷಗಾರನನ್ನಾಗಿ ಮಾಡಿದ್ದು, ಅವರ ವಿರುದ್ಧ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಈ ಹಂತದಲ್ಲಿ 1 ಹಾಗೂ 3ನೇ ಪ್ರತಿವಾದಿಗಳ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.

This is a True Copy of the Court Records Online. Authenticated @ districts.ecourtsindia.com/cnr/KAKD520016322018/truecopy/order-2.pdf

www.ecourtsindia.com